'ಪರ್ವಾಗಿಲ್ಲ.. ಹುಡುಗಿ ನೋಡಾಗ ಕಾಣುವಷ್ಟು ಮೃದುವೇನಲ್ಲ.. ಎಷ್ಟಾದರೂ ಇಂಜಿನಿಯರಿಂಗ್ ಕಲಿತಿರೋಳಲ್ಲ' ತಾಯಿಯ ಕೊಂಕು ನುಡಿಗಳನ್ನು ಆದರ್ಶ ಆಲಿಸದಾದ. ತಾಯಿಗೆ ತಾನು ಅವಳನ್ನು ಮೆಚ್ಚಿರಬಹುದೆಂಬ ಅನುಮಾನದಿಂದ ಹೀಗೆ ವರ್ತಿಸುತ್ತಿರಬಹುದೇ ಎಂದು ತೋರಿತು.

ಅಪೂರ್ವ ಅಲ್ಲಿಂದ ಹೊರಟಾಗ, ಆದರ್ಶ ಎದ್ದು ಅವಳ ಹಿಂದೆಯೇ ನಡೆದ,'ಅಪೂರ್ವ'.. ಅವಳು ನಿಂತಲ್ಲೇ ತಿರುಗಿ ನೋಡಿದಳು.

'ನೀವು .. ನನ್ನನ್ನು ಮರೆತು ಬಿಟ್ಟಿರೋ ಹೇಗೇ.. ಒಂದೇ ಒಂದು ಕಾಲ್ ಇಲ್ಲ..! ನಿಮ್ಗೆ ನಾನು ನೆನಪೇ ಆಗಿಲ್ಲವೇನು..?' ಎಂದವನು ನಾಲಗೆ ಕಚ್ಚಿಕೊಂಡ. ಹೃದಯದ ಮಾತು ಬಾಯಿಗೆ ಬಂದಾಗ ಕಸಿವಿಸಿಯಾಯಿತು. ಅವಳಿಗೆ ಹೇಗೆ ಪ್ರತಿಕ್ರಿಯಿಸಬೇಕೋ ತೋಚದೇ ತಬ್ಬಿಬ್ಬಾಯಿತು. ಅವನ ಮಾತಿನಲ್ಲಿ ಅಡಗಿದ್ದ ಹೊಸ ಭಾವನೆಗಳು, ಕಂಗಳಲ್ಲಿನ ಮಿಂಚು ಅವನ ಮನದ ಓಘವನ್ನು ಅವಳು ಗುರುತಿಸಿದಳು. ಸೂರ್ಯನನ್ನು ಸಮರ್ಥಿಸಿಕೊಂಡು ನೆರೆಹೊರೆಯರನ್ನು ಯುದ್ಧದಲ್ಲಿ ಸೋಲಿಸಿದ್ರಂತೆ..ರಾಯರನ್ನು ಮಗನನ್ನು ಒಟ್ಟು ಮಾಡಿದ್ರಂತೆ.. ಅತ್ತೆ ನಿಮ್ಮ ಬಗ್ಗೆ ಹೊಗಳಿಕೆಯ ಮಳೆ ಸುರಿಸ್ತಿದ್ದಾರೆ' ಅವಳ ಬಗ್ಗೆ ಆದರ್ಶನ ಕಂಗಳಲ್ಲೂ ಮೆಚ್ಚುಗೆಯ ಮಹಾಪೂರವೇ ಇತ್ತು.

'ನಾನು ..ಯಾರನ್ನೂ ವಹಿಸಿಕೊಂಡು ಮಾತನಾಡಿಲ್ಲ.. ನನಗನ್ನಿಸಿದ್ದನ್ನು ಪ್ರಾಮಾಣಿಕವಾಗೇ ಹೇಳಿದೆನಷ್ಟೇ..ತಪ್ಪು ಅನ್ನೋದು ಒಂದು ಹಾಳೆ.. ಸಂಬಂಧಗಳು ಅನ್ನೋದು ಪುಸ್ತಕದ ಥರ.. ಒಂದು ಹಾಳೆಗೆ ಪುಸ್ತಕವನ್ನೇ ಹೇಗೆ ಹಾಳು ಮಾಡಲಾಗುವುದಿಲ್ಲವೋ.. ಹಾಗೇ ಒಂದು ತಪ್ಪಿಗಾಗಿ ಸಂಬಂಧಗಳನ್ನು ಮುರೀಲಿಕ್ಕೆ ಸಾಧ್ಯಾನಾ..? ಅದೂ ರಕ್ತ ಸಂಬಂಧ..? ಸೂರ್ಯ, ಪಾಪ..ತನ್ನ ಹೆತ್ತವರು ತನ್ನನ್ನು  ಸ್ವೀಕರಿಸಬೇಕು ಅಂತ ಹಂಬಲಿಸ್ತಿದ್ರು.'

'ನಿನಗೆ ಒಂದು ಸಂಗತಿ ಗೊತ್ತಿಲ್ಲ ಅಪೂರ್ವ' ಆದರ್ಶ ತಡೆ ತಡೆದು ನುಡಿದ. ಅಪೂರ್ವ ಪ್ರಶ್ನಾರ್ಥಕವಾಗಿ ಅವನತ್ತ ನೋಡಿದಳು. ಹಿಂದಿನ ಬಾರಿಯೂ ಆತ ಏನೋ ಹೇಳಲು ಹೋಗಿ ತಡೆದುದ್ದನ್ನು ನೆನೆಸಿಕೊಂಡಳು.

'ನಮ್ಗೆಲ್ಲಾ ಗೊತ್ತಿರುವ ಒಂದು ಸತ್ಯ.. ಸೂರ್ಯನ ಮತ್ತು ರಾಯರ ಬಗ್ಗೆ ಅದು ನಿನಗೆ ಗೊತ್ತಿಲ್ಲ..'

'ಏನದು..?'

'ನಾನು ಹೇಳಲ್ಲ.. ಸಮಯ ಬಂದಾಗ ನಿಮ್ಗೇ ಗೊತ್ತಾಗುತ್ತೆ' ಎಂದ.

## ಅಧ್ಯಾಯ 13

ಆದರ್ಶ ತನಗೆ ಹೇಳಲಿಚ್ಛಸದೇ ಇರುವ, ರಾಯರ ಮತ್ತು ಸೂರ್ಯನ ನಡುವಿನ ಸಂಗತಿ ಏನಿರಬಹುದು? ಅಪೂರ್ವ ಕುತೂಹಲ ತೋರಿಸಿದರೂ, ಆದರ್ಶ ಹೇಳದಾದ.

'ಸ್ಟಡೀಸ್ ಹೇಗೆ ನಡೀತಾ ಇದೆ?' ಎಂದು ವಿಷಯಾಂತರಗೊಳಿಸಿದ. ಅವನ ಉದ್ದೇಶ ಅಪೂರ್ವಳಿಗೆ ತಿಳಿಯಿತು. ಅನಂತರ ಅವಳು ಕೆದಕಿ ಕೇಳಲಿಲ್ಲ.  ವಿದ್ಯಾ, ವಿಜಯಮ್ಮ ಮಾತನಾಡುತ್ತ ಕೋಣೆಯಿಂದ ಹೊರಬಂದಾಗ ಅಪೂರ್ವ, ಆದರ್ಶನಿಗೆ ತಿಳಿಸಿ ತನ್ನ ಕೋಣೆಯತ್ತ ನಡೆದು ಬಿಟ್ಟಳು. ಅವರು ಹೋಗುವ ತನಕವೂ ಅಪೂರ್ವ ಕೋಣೆಯಿಂದ ಹೊರಬರಲಿಲ್ಲ. ಆದರ್ಶ ನಿಗೆ ಅವಳನ್ನು ಕಾಣುವ ತವಕ ಮೂಡಿದರೂ ತನ್ನ ಆಸೆಯನ್ನು ನಿಯಂತ್ರಿಸಿ ಕೊಂಡ. ನಿಂತಲ್ಲೇ ಆದರ್ಶನ ಚಡಪಡಿಕೆಯನ್ನು ಗಮನಿಸುತ್ತಿದ್ದ ಸೂರ್ಯ ನಿಗೆ, ಆದರ್ಶನ ಮನೋಭಾವ ಅರಿವಾಗಿತ್ತು.

ಅಪೂರ್ವಳ ಬಗ್ಗೆ ಅವನ ಹೃದಯಲ್ಲೂ ಈಗ ಅಭಿಮಾನ, ಗೌರವದ ಜೊತೆಗೆ ಹೊಸ ಭಾವ ಅಂಕುರಿಸಿತ್ತು. ತಾನು ಅವಳೊಡನೆ ಕೆಟ್ಟದಾಗಿ ವ್ಯವಹರಿಸಿದರೂ, ಅದನ್ನೆಲ್ಲ ಮರೆತು ತನ್ನ ಪರವಾಗಿ ಅವಳು ಸಮರ್ಥಿಸಿಕೊಂಡು ನಿಂತ ರೀತಿಗೆ ಅವನು ಪೂರ್ತಿಯಾಗಿ ಸೋತಿದ್ದ. ಅವಳನ್ನು ಅಳೆಯಲು ಅದೊಂದು ಸಂದರ್ಭವೇ ಸಾಕಾಗಿತ್ತು. ಅಂಥ ಹೆಣ್ಣು ಅವನ ಹೃದಯದ ಕದ ತಟ್ಟಿದ್ದರಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಿಲ್ಲ. ತನ್ನ ಹೆತ್ತವರಿಗಾಗಿ ಮಿಡಿಯುವ ಅವಳು, ತನ್ನ ಪರವಾಗಿ ನಿಂತ ಅವಳು ಇಲ್ಲೇ ಶಾಶ್ವತವಾಗಿ ಉಳಿಯಬಾರದೇ ಎಂಬ ಬೆಚ್ಚನೆಯ ಭಾವವೂ ಅವನ ಮನದಲ್ಲಿ ನುಸುಳಿತ್ತು. ಅವನ ಜೀವನದಲ್ಲಿ ತಾಯಿಯನ್ನು ಬಿಟ್ಟರೆ, ಸಮೀಪದಿಂದ ಕಂಡಂಥ ಮೊದಲ ಹೆಣ್ಣು ಅಪೂರ್ವ. ಹೆಸರಿಗೆ ತಕ್ಕಂತೆ ಅಪೂರ್ವಳೇ! ಆದರೆ ತನ್ನಂಥ ಜೈಲಿಗೆ ಹೋಗಿ ಬಂದ ಅಪರಾಧಿ ಎಲ್ಲಿ..? ಇಂಜಿನಿಯರಿಂಗ್ ಪದವೀಧರೆ ಎಲ್ಲಿ? ಅವಳ ವ್ಯಕ್ತಿತ್ವ ಎಲ್ಲಾ ವಿಧದಲ್ಲೂ ಉನ್ನತವಾಗಿದೆ. ತಾನೆಂದೂ ಅವಳಿಗೆ ಅರ್ಹನಲ್ಲ! ಆದರ್ಶ ಅವಳನ್ನು ಅಪೇಕ್ಷೆ ಪಡುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅಪೂರ್ವ ಎಲ್ಲರ ಕನಸಿನ ಹೆಣ್ಣಾಗ ಬಲ್ಲಳು! ನನಸಾಗುವಂಥ ಅರ್ಹತೆ ಅಪೇಕ್ಷಿಸುವವನು ಪಡೆದಿರಬೇಕು. ಆದರ್ಶ ಡಾಕ್ಟರ್, ಅಪೂರ್ವ ಇಂಜಿನಿಯರ್. ಅವರಿಬ್ಬರದ್ದು ಒಳ್ಳೇ ಅನುರೂಪವಾದ ಜೋಡಿಯಾಗಬಲ್ಲದು.. ಸೂರ್ಯ ತನ್ನ ಆಸೆಗಳನ್ನು ಒಳಗೇ ಸಮಾಧಿ ಮಾಡಿಕೊಂಡ.

* * *

## ವ್ಯವಹಾರಕ್ಕೆ ಮರಳಿದ ರಾಯರು

ರಾಯರು ಪೂರ್ತಿಯಾಗಿ ಚೇತರಿಸಿಕೊಂಡು ತಮ್ಮ ವ್ಯವಹಾರಕ್ಕೆ ಮರಳಿದರು. ಅವರು ಒಂಟಿಯಾಗಿ ಕಾರು ಓಡಿಸುವುದು ಅಪೂರ್ವಳಿಗಾಲೀ ವಿಜಯಮ್ಮನಿಗಾಗಲೀ ಇಷ್ಟವಿರಲಿಲ್ಲ. ಅವರ ಮಾತಿಗೆ ರಾಯರು ಬೆಲೆ ಕೊಡಲಿಲ್ಲ.

'ಮನೇಲೇ ಕೂತ್ಕೊಂಡ್ರೆ ಜೀವನ ನಡೆಯುತ್ತದೇನು? ನಮ್ಮನ್ನೇ ನಂಬ್ಕೊಂಡು ತುಂಬಾ ಜನ ಕೆಲಸದವರಿದ್ದಾರೆ...ಅವ್ರಿಗೆ ನಡು ನೀರಿನಲ್ಲಿ ಕೈ ಬಿಡಲು ಸಾಧ್ಯವಿಲ್ಲ. ನನ್ನ ಕೆಲಸ ನಾನೇ ತಾನೇ ಮಾಡ್ಬೇಕು. ನೀವು ಬೇಡ ಅಂದ್ರೆ ನನ್ನ ಕೆಲಸ ನಿಭಾಯಿಸುವವರು ಯಾರು?'

ರಾಯರ ಪ್ರಶ್ನೆಗೆ ಅಪೂರ್ವ ಅಷ್ಟೇ ಸಹಜವಾಗಿ,'ಯಾಕೆ ಅಂಕಲ್..? ಇಷ್ಟು ದಿನ ನೀವೊಬ್ರೇ ಇದ್ರಿ.. ಈಗ ನಿಮ್ಗೆ ಹೆಗಲು ಕೊಡಲು ಸೂರ್ಯ ಬಂದಿದ್ದಾರಲ್ಲಾ? ನಿಮ್ಜೊತೆ ಅವ್ರನ್ನೂ ಕರ್ಕೊಂಡು ಹೋಗಿ ಕೆಲಸ ಕಲಿಸಿ.. ಅವ್ರಿಗೂ ಇಲ್ಲಿ ಮನೆಯೊಳಗೇ ಇದ್ದು ಹೊತ್ತು ಕಳೆಯಲು ಬೇಸರ ವಾಗಿರಬಹುದು' ಅಪೂರ್ವ ನುಡಿದಾಗ ಆ ಯೋಚನೆ ತಮಗೇಕೆ ಬರಲಿಲ್ಲವೆಂದು ರಾಯರು ಅಚ್ಚರಿಪಡುವಂತಾಯಿತು. ಅದೇ ಭಾವ ಸೂರ್ಯನ ಮುಖದ ಮೇಲೂ ಇತ್ತು.

'ನಾನಾ? ಕೆಲಸ ನಿಭಾಯಿಸುವುದಾ..? ನನ್ಗೆ ಅದ್ರ ಗಂಧ ಗಾಳೀನೇ ಗೊತ್ತಿಲ್ಲ' ಎಂದು ರಾಗವೆಳೆದ.

'ಗೊತ್ತಿಲ್ಲವೆಂಬ ಕಾರಣಕ್ಕೇ.. ಅಂಕಲ್ ಜೊತೆ ಹೋಗಿ ಕಲಿಯಲು ಹೇಳಿದ್ದು.. ನೀರಿಗಿಳಿಯದೇ ಈಜೋದು ಹೇಗೆ ಬರಲ್ವೋ.. ಹಾಗೇನೇ ಇದು ಕೂಡಾ. ಸೂರ್ಯ.. ನಾನು ಹೀಗೆ ಹೇಳ್ತೀನಿ ಅಂತ ತಪ್ಪು ತಿಳೀಬೇಡಿ.. ನನ್ಮೇಲೆ ಸಿಟ್ಟು ಮಾಡ್ಕೋಬೇಡಿ. ಅಂಕಲ್‌ಗೂ ವಯಸ್ಸಾಯ್ತು.ಆರೋಗ್ಯ ಬೇರೆ ಸರಿ ಇಲ್ಲ.. ನೀವು ಈಗ ಅವ್ರ ಒತ್ತಾಸೆಯಾಗಿ ನಿಲ್ಲಲೇಬೇಕು. ಅವ್ರಿಗೆ ಹೆಗಲು ಕೊಡಲೇ ಬೇಕು' ಅಪೂರ್ವಳ ಮಾತಿಗೆ ಸೂರ್ಯ ಅಸಹನೆಯಿಂದ, 'ಅವ್ರು ನನ್ನನ್ನು ಇಷ್ಟು ದಿನಗಳ ಕಾಲ ಹತ್ರ ಸೇರಿಸಿಕೊಳ್ಳಲಿಲ್ಲ.. ಈಗ ಅವ್ರಿಗೆ ನಾನು ಬೇಕಾ..?' ಮನದಲಿಡಗಿದ್ದ ಕಹಿ ಹೊರಗೆ ಬಂದೇ ಬಿಟ್ಟಿತು. ಅವನ ಮಾತುಗಳನ್ನು ಆಲಿಸಿ ರಾಯರ ಮುಖ ಕಪ್ಪಿಟ್ಟಿತು. ವಿಜಯಮ್ಮನಿಗೂ ಮಗ ಹಾಗಂದದ್ದು ಸರಿ ಬರಲಿಲ್ಲ.

'ಅದನ್ನೇ ಆಡಿ ಮನಸ್ಸು ಹಾಳು ಮಾಡ್ಬೇಡಾ.. ಆಗಿದ್ದು ಕೆಟ್ಟ ಕನಸು ಅಂತ ಮರೆತು ಬಿಡು.. ಈಗ ನೀನು ಹೊಸ ಜೀವನ ಆರಂಭಿಸಲು ಇದು ಒಳ್ಳೇ ಅವಕಾಶ. ಅಪೂರ್ವ ಹೇಳಿದ್ದು ಸರಿಯಾಗೇ ಇದೆ. ಖಾಲಿ ಮನಸ್ಸು ದೆವ್ವದ ಕಾರ್ಖಾನೆಯಂತೆ.. ಬೇಡದ ಇಂಥ ಆಲೋಚನೆಗಳೇ ಬರೋದು. ಅದರ ಬದಲು ಅಪ್ಪಂಗೆ ಸಹಾಯ ಮಾಡು. ಸಮಾಜದಲ್ಲಿ ನೀನು ಕಳ್ಕೊಂಡ ಸ್ಥಾನ ಮಾನ ಪಡೆಯಲು ಇದು ಒಳ್ಳೇ ಅವಕಾಶ' ವಿಜಯಮ್ಮನಿಗೆ ಮಗನನ್ನು ಒಂದು ನೆಲೆ ಕಾಣಿಸುವ ಕಾತರ.

'ಅಂಕಲ್, ಸೂರ್ಯನಿಗೆ ಕಾರು ಡ್ರೈವಿಂಗ್ ಸ್ಕೂಲ್‌ಗೆ ಸೇರಿಸಿ' ಎಂದಾಗಲಂತೂ ಸೂರ್ಯ ಅವಳನ್ನು ಸುಟ್ಟು ಬಿಡುವಂತೆ ನೋಡಿದ.

'ನಾನೆಲ್ಲೂ ಬರೋದಿಲ್ಲ.. ನನಗೆ ಯಾವುದೂ ಬೇಡ' ಎಂದವನೇ ಅಲ್ಲಿ ನಿಲ್ಲದೇ ತನ್ನ ಕೋಣೆಗೆ ನಡೆದು ಬಿಟ್ಟ. ಅವನ ವರ್ತನೆಯ  ಬಗ್ಗೆ ಸೋಜಿಗವೆನಿಸಿದರೂ ಅಪೂರ್ವ ವಿಚಲಿತಗೊಳಲಿಲ್ಲ. ಬೆಪ್ಪಾಗಿ ಕುಳಿತಿದ್ದ ರಾಯರಿಗೆ, 'ನೀವೇನೂ ತಲೆಕೊಡಿಸಿಕೊಳ್ಳಬೇಡಿ ಅಂಕಲ್.. ಅವ್ರ ಹತ್ರ